ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 2, May-June 2023, Pp. 47-52
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# 1830–31ರ ನಗರ ರೈತ ದಂಗೆಯಲ್ಲಿ ತುಮಕೂರು ಜಿಲ್ಲೆಯ ಪಾತ್ರ: ಒಂದು ವಿಶ್ಲೇಷಣೆ

**ಡಾ.ಎಲ್.ಪಿ.ರಾಜು**
ಪ್ರಾಧ್ಯಾಪಕರು, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

***Abstract:***

*ತುಮಕೂರು ಜಿಲ್ಲೆ ರೈತರು ತಮ್ಮ ವಿರುದ್ಧ ನಡೆಯುತ್ತಿದ್ದ ಆರ್ಥಿಕ ಶೋಷಣೆಯಿಂದ ಹೊರ ಬರಲು 1830–31ರಲ್ಲಿ ನಗರ ಪ್ರಾಂತ್ಯದಲ್ಲಿ ಆರಂಭವಾದ ರೈತರ ದಂಗೆಯಲ್ಲಿ ಸಕ್ರಿಯವಾಗಿ ಕೈಜೋಡಿಸಿ ತನ್ಮೂಲಕ ತಮ್ಮ ಸಮಸ್ಯೆಗಳಿಂದ ಹೊರಬರಲು ಪ್ರಯತ್ನಿಸಿದರಲ್ಲದೆ, 1831ರಲ್ಲಿ ಮೈಸೂರು ಸಂಸ್ಥಾನದ ಆಡಳಿತಾಧಿಕಾರವು ಅಂದಿನ ಮಹಾರಾಜರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ ಕೈತಪ್ಪಲು ಹಾಗೂ ಬ್ರಿಟಿಷರ ನೇರ ಆಳ್ವಿಕೆ ಮೈಸೂರು ಸಂಸ್ಥಾನದಲ್ಲಿ ಬರಲು ಕಾರಣವಾದ ನಗರ ದಂಗೆ ಯು ಕೇವಲ ನಗರ ಪ್ರಾಂತ್ಯಕ್ಕೆ ಮಾತ್ರವೇ ಸೀಮಿತವಾಗಿರದೆ, ಅದು ಹೆಚ್ಚು ಕಡಿಮೆ ಮೈಸೂರು ಸಂಸ್ಥಾನದಾದ್ಯಂತ ಭುಗಿಲೆದ್ದ ರೈತರ ದಂಗೆಯಾಗಿದ್ದಿತು. ನಗರ ರೈತ ದಂಗೆಯಲ್ಲಿ ತುಮಕೂರು ಜಿಲ್ಲೆಯ ಪಾತ್ರವನ್ನು ವಿಶ್ಲೇಷಿಸುವ ಉದ್ದೇಶ ಈ ಲೇಖನದ್ದಾಗಿದೆ.*

***Keywords:*** *ನಗರ ದಂಗೆ, ತುಮಕೂರು, ರೈತರು, 3ನೇ ಕೃಷ್ಣರಾಜ ಒಡೆಯರು, ರಾಜ್ಯಾಡಳಿತ*

## ಪೀಠಿಕೆ

1799ರಲ್ಲಿ ಟಿಪ್ಪುವಿನ ಮರಣದ ನಂತರ ಮೈಸೂರು ಸಂಸ್ಥಾನವು ಬ್ರಿಟಿಷರು, ಮರಾಠರು, ಹೈದರಾಬಾದಿನ ನಿಜಾಮ ಹಾಗೂ ಮೈಸೂರು ಒಡೆಯರಲ್ಲಿ ಹಂಚಿಕೆಯಾಯಿತು. ಮುಮ್ಮಡಿ ಕೃಷ್ಣರಾಜ ಒಡೆಯರು ಸಂಸ್ಥಾನದ ರಾಜರಾಗುತ್ತಾರೆ. ಮುಮ್ಮಡಿಯವರು 1811 ರಿಂದ 1831 ರವರೆಗೆ ಸ್ವತಂತ್ರವಾಗಿ ಆಳ್ವಿಕೆಯನ್ನು ನಡೆಸುತ್ತಾರೆ. 1831ರಲ್ಲಿ ನಗರ ದಂಗೆಯು ಸಂಭವಿಸಿ ಮುಮ್ಮಡಿ ಕೃಷ್ಣರಾಜ ಒಡೆಯರು ತಮ್ಮ ಅಧಿಕಾರವನ್ನು ಕಳೆದುಕೊಳ್ಳುತ್ತಾರೆ. ಈ ನಗರ ದಂಗೆಯಲ್ಲಿ ತುಮಕೂರು ಜಿಲ್ಲೆಯ ಪಾತ್ರವೂ ಸಹ ಪ್ರಮುಖವಾದದ್ದಾಗಿದೆ.

ಈ ದಂಗೆಯು ಮೂಲತಃ ಶಿವಮೊಗ್ಗ ಜಿಲ್ಲೆಯ ಕುಂಸಿ ತಾಲ್ಲೂಕಿನ ಹೊನ್ನಾಳಿ ಸಮೀಪದ "ಚೀನಿಕಟ್ಟೆ" ಗ್ರಾಮದ ಸಾಮಾನ್ಯ ರೈತನ ಮಗನಾದ ಹಾಗೂ ಕೆಳದಿಯ ರಾಜವಂಶದವನೆಂದು ಹೇಳಿಕೊಳ್ಳುತ್ತಿದ್ದ ***ಬೂದಿಬಸಪ್ಪ/ಹೈಗಮಲ್ಲ/ಬಸವಪ್ಪ*** ಹಾಗೂ ತರಿಕೆರೆಯ ನಿವೃತ್ತ ಪಾಳೇಗಾರನಾಗಿದ್ದ ***ರಂಗಪ್ಪನಾಯಕ*** ಎಂಬವರುಗಳಿಂದ ಆರಂಭವಾದ ಈ ದಂಗೆಯಲ್ಲಿ ನೊಂದ, ಶೋಷಿತ ಹಾಗೂ ಅತೃಪ್ತ ರೈತರು ಸಕ್ರಿಯವಾಗಿ ಭಾಗವಹಿಸಿದ್ದರು. ಅದಕ್ಕೆ ಕಾರಣ ರೈತರ ಮೇಲೆ ವಿಧಿಸುತ್ತಿದ್ದ ಅತಿಯಾದ ಭೂಕಂದಾಯ, ತೆರಿಗೆಗಳು, ಲಂಚ, ಕಿರುಕುಳ, ದುರಾಡಳಿತ, ಅಧಿಕಾರಿಗಳಿಂದ ಉಂಟಾಗಿದ್ದ ಶೋಷಣೆ ಇತ್ಯಾದಿ ಕಾರಣವಾಗಿದ್ದು, ಇದನ್ನು ತಪ್ಪಿಸಲು ಮಹಾರಾಜ 3ನೇ ಕೃಷ್ಣರಾಜ ಒಡೆಯರು ಸೂಕ್ತ ಸಮಯದಲ್ಲಿ ಸರಿಯಾದ ಕ್ರಮಗಳನ್ನು ಕೈಗೊಳ್ಳದಿದ್ದು ಮತ್ತು ಅವರ

***Please cite this article as:*** ರಾಜು ಎಲ್ ಪಿ. (2023). 1830–31ರ ನಗರ ರೈತ ದಂಗೆಯಲ್ಲಿ ತುಮಕೂರು ಜಿಲ್ಲೆಯ ಪಾತ್ರ: ಒಂದು ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್.* 2(2), 47–52.

ಆಡಳಿತ ಅಸಮರ್ಥತೆ ಕಾರಣವಾಗಿದ್ದವು. ಹಾಗಾಗಿ ಈ ದಂಗೆ ಮೈಸೂರು ಸಂಸ್ಥಾನದಾದ್ಯಂತ ಕ್ಷಿಪ್ರವಾಗಿ ಆದರೆ ಏಕಕಾಲದಲ್ಲಿ ಭುಗಿಲೆದ್ದಿತು. ಈ ಬಗ್ಗೆ ಮದ್ರಾಸ್ ಪ್ರಾಂತ್ಯದ ಅಂದಿನ ಗೌರ್‍ನರ್ ಅಗಿದ್ದ ಲೂಷಿಂಗ್ಟನ್‌ನ ಭಾರತದ ಗೌರ್‍ನರ್ ಜನರಲ್ ವಿಲಿಯಂ ಬೆಂಟಿಂಕ್‌ಗೆ ಜುಲೈ 4, 1831ರಂದು ಬರೆದ ಪತ್ರದಲ್ಲಿ *"ಬಹಳ ದಿನಗಳಿಂದಲೂ ರಾಜ್ಯಾಡಳಿತದ ಹಣಕಾಸು ವಿಭಾಗಗಳಲ್ಲಿ ಬಹಳಷ್ಟು ಅವ್ಯವಸ್ಥೆ* ಇದ್ದು, *ದುರಾಡಳಿತ ಮತ್ತು ದಬ್ಬಾಳಿಕೆಯಿಂದ ಜನರು ದಂಗೆಯ ಮಾರ್ಗ ಹಿಡಿದಿರುವರು"* ಎಂದು ನಮೂದಿಸುತ್ತಾನೆ. ಇಂತಹ ಸಂದರ್ಭದಲ್ಲಿ ಬೂದಿಬಸಪ್ಪನು ರೈತರು ಸರ್ಕಾರಕ್ಕೆ ನೀಡಬೇಕಾಗಿರುವ ಎಲ್ಲಾ ತೆರಿಗೆ ಬಾಕಿಯನ್ನು ಮನ್ನಾ ಮಾಡುವುದಾಗಿಯೂ, ಭೂಕಂದಾಯದ ಪ್ರಮಾಣ ಕಡಿಮೆ ಮಾಡುವುದಾಗಿಯೂ ಅದಕ್ಕಾಗಿ ಮೈಸೂರು ಅರಸೊತ್ತಿಗೆಯನ್ನು ಕಿತ್ತೊಗೆಯಲು ಸಹಕರಿಬೇಕೆಂದು ಏಪ್ರಿಲ್ 1830ರಲ್ಲಿ ತನ್ನನ್ನು ರಾಜನೆಂದು ಘೋಷಿಸಿಕೊಂಡು ಭರವಸೆ ನೀಡಿದನಲ್ಲದೆ ಅಂತಹದ್ದೇ ವಿಷಯವನ್ನೊಳಗೊಂಡ ಪತ್ರಗಳಿಗೆ ಅಧಿಕ ಸಂಖ್ಯೆಯ ಪ್ರಭಾವೀ ಪಟೇಲ, ಶ್ಯಾನುಭೋಗರ ಸಹಿ ಮಾಡಿಸಿ ರಾಜ್ಯದ ಇತರ ಭಾಗದ ರೈತರುಗಳಿಗೆ ಕಳುಹಿಸಲಾಯಿತು. ಈಗಾಗಲೆ ನೊಂದಿದ್ದ ರೈತರಿಗೆ ಇದು ಒಂದು ಆಶಾಕಿರಣವಾಗಿ ಕಂಡು ಅವರು ಈ ದಂಗೆಯಲ್ಲಿ ಕೈಜೋಡಿಸಲು ಮುಂದೆ ಬಂದರು.

### 1830–31 ರ ನಗರ ರೈತ ದಂಗೆಯಲ್ಲಿ ತುಮಕೂರು ಜಿಲ್ಲೆಯ ಪಾತ್ರ

ಈ ದಂಗೆಯು ಮೈಸೂರು ಸಂಸ್ಥಾನದಲ್ಲಿ ಎಲ್ಲೆಡೆ ಹರಡಿ, ತಮಕೂರು ಜಿಲ್ಲೆಗೂ ಸಹ ವ್ಯಾಪಿಸಿತು. ಬೂದಿಹಾಳಿನ ಜನರು ತಮ್ಮ ತಾಲೂಕಿನಿಂದ ***'ಇರ್ಸಾಲ್'***[1] *(Ersal)* ತೆಗೆದುಕೊಂಡು ಹೋಗದಂತೆ ಅಡ್ಡಿಪಡಿಸಿದರು. ಈ ಸುದ್ದಿ ತಿಳಿದ ಫೌಜುದಾರ ತಿಮ್ಮಪ್ಪರಾಜ ಅರಸನು ತುಮಕೂರು ಜಿಲ್ಲೆಯ ಹುಳಿಯಾರಿಗೆ ಆಗಮಿಸಿ ಈ ಬಗ್ಗೆ ಚರ್ಚಿಸಲು ರೈತರುಗಳನ್ನು ಆಹ್ವಾನಿಸಿದನು. ಆದರೆ ಅವನ ಕರೆಗೆ ಯಾವೊಬ್ಬ ರೈತನೂ ಓಗೊಟ್ಟು ಆಗಮಿಸಲಿಲ್ಲ. ಬದಲಿಗೆ ಐದರಿಂದ ಆರು ಸಾವಿರದಷ್ಟು ರೈತರು ಅವನು ಬೀಡು ಬಿಟ್ಟಿದ್ದ ಸ್ಥಳಕ್ಕೆ ತುಸು ದೂರದಲ್ಲಿ ದೊಣ್ಣೆ, ಕವಣೆ, ಕತ್ತಿ. ಭರ್ಜಿ, ತುಪಾಕಿ ಮುಂತಾದ ಆಯುಧಗಳೊಂದಿಗೆ ನೆರೆದು ಸುತ್ತಮುತ್ತಲ ಮನೆಗಳನ್ನು ಕೊಳ್ಳೆಹೊಡೆದರು. ಅಲ್ಲದೆ ದಂಗೆ ಎದ್ದ ರೈತರುಗಳಲ್ಲಿ ಸುಮಾರು ಹತ್ತು ಜನ ರೈತರು ಫೌಜುದಾರನ ಹತ್ತಿರ ಹೋಗಿ ಪೌಜುದಾರನ ಭೇಟಿಗೆ ಅನುಮತಿ ಕೋರಿದರು. ಆದರೆ ಫೌಜುದಾರನು ಅವರನ್ನು ಭೇಟಿಮಾಡಲು ನಿರಾಕರಿಸಿದ್ದಲ್ಲದೆ ಅವರು ತಮ್ಮ ಬೇಡಿಕೆಗಳನ್ನೂ ಲಿಖಿತವಾಗಿ ನೀಡುವಂತೆ ಸೂಚಿಸಿದನು. ಇದರಿಂದ ಕ್ರೋಧಿತರಾದ ರೈತರು ತಮ್ಮ ಜೊತೆಯಲ್ಲಿ ತಂದಿದ್ದ ಕೊಂಬು ಕಹಳೆಗಳನ್ನು ಜೋರಾಗಿ ಊದುತ್ತಾ ತಮ್ಮಟೆ, ಡೋಲುಗಳನ್ನು ಬಡಿಯುತ್ತಾ ತಮ್ಮ ಅಸಂತೋಷವನ್ನು ವ್ಯಕ್ತಪಡಿಸುತ್ತಾ ಆ ಫೌಜುದಾರನ ಡೇರೆಯನ್ನು ಸುತ್ತುವರಿದರು. ಆದರೆ ಫೌಜುದಾರನು ಎಂಭತ್ತು ಸವಾರ ಮತ್ತು ಎಂಭತ್ತು ಕಂದಾಚಾರ ಸೈನಿಕರನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ಬಂದಿದ್ದು, ತಮ್ಮನ್ನು ಸಮೀಪಿಸುತ್ತದ್ದ ರೈತರನ್ನು ಎದುರಿಸಲು ತಮ್ಮ ಕತ್ತಿಗಳನ್ನು ಹೊರಗೆಳೆದಾಗಿ ರೈತರು ಕೆಲ ಕಾಲ ಸ್ಥಬ್ಧರಾಗಿದ್ದು, ನಂತರ ತಮ್ಮಲ್ಲಿ ಒಂದಿಬ್ಬರನ್ನು ಫೌಜುದಾರನ ಬಳಿಗೆ ಕಳುಹಿಸಿ ಹಳ್ಳಿಯವರನ್ನು ***'ಕೂಟಂ'***[2] ನೊಂದಿಗೆ ಸೇರಿಸಕೊಳ್ಳಲು ಹುರಿದುಂಬಿಸಿದ ಆರೋಪದ ಮೇಲೆ ತನ್ನ ಬಳಿ ಬಂಧನನಿಟ್ಟುಕೊಂಡಿದ್ದ ತಮ್ಮ ಇಬ್ಬರು ಮಖಂಡರನ್ನು ಬಿಡುಗಡೆ ಮಾಡಿದರೆ ತಾವು ಇಲ್ಲಿಂದ ತೆರಳುವುದಾಗಿ ತಿಳಿಸಿದಾಗ ಪರಿಸ್ಥಿತಿ

[1] ***ಇರ್ಸಾಲ್'*** ಎಂದರೆ ತಾಲೂಕು ಖಜಾನೆಗಳಲ್ಲಿನ ಹಣವನ್ನು ಮೈಸೂರು ಖಜಾನೆಗೆ ಸಲ್ಲಿಸುವುದಕ್ಕೆ ತೆಗೆದುಕೊಂಡು ಹೋಗುವುದು.

[2] *'ಕೂಟಂ'* ಎಂದರೆ ಇವುಗಳು ದಂಗೆಯ ಒಕ್ಕೂಟಗಳಾಗಿದ್ದು, ಎರಡರಿಂದ ಮೂರು ಸಾವಿರದಷ್ಟು ರೈತರು ಇಂತಹ ಕೂಟಗಳಲ್ಲಿ ಸಂಘಟಿತರಾಗಿದ್ದರು.

ಕೈಮೀರಿರುವುದನ್ನು ಗಮನಿಸಿದ ಫೌಜುದಾರನು ಆ ಬಂಧಿಗಳನ್ನು ಬಿಡುಗಡೆಗೊಳಿಸಿದ.

ರೈತರು ನಡೆಸಿದ ಈ 1830–31 ರ ನಗರ ದಂಗೆಯ ಕುರಿತು ಫೌಜುದಾರನು ಮೈಸೂರು ಮಹಾರಾಜರಿಗೆ ವರದಿ ಮಾಡುತ್ತಾ ಪಕ್ಕದ ತಾಲ್ಲೂಕುಗಳಾದ ಕಂಡೀಕೆರೆ, ಚಿಕ್ಕನಾಯಕನಹಳ್ಳಿ, ಹಾಗಲವಾಡಿ, ಹೊನ್ನವಳ್ಳಿ ಬೂದಿಹಾಳುಗಳ ಜನರು ಗುಂಪು ಗುಂಪಾಗಿ ಕೊಂಬು, ಕಹಳೆ ಊದುತ್ತಾ ಜೋರಾಗಿ ತಮಟೆ–ಡೋಲು ಬಡಿಯುತ್ತಾ ಈ ದಂಗೆಯಲ್ಲಿ ಭಾಗವಹಿಸುವಂತೆ ಹುರಿದುಂಬಿಸುತ್ತಾ ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಹೋಗುತ್ತಿದ್ದು, ಈ ಭಾಗದ ಜನರು ದಂಗೆಯನ್ನು ಪ್ರೋತ್ಸಾಹಿಸುವುದು ಮತ್ತು ಭಾಗವಹಿಸುವುದು ತಮ್ಮ ಆದ್ಯ ಕರ್ತವ್ಯವೆಂದು ಭಾವಿಸಿರುವುದು ಕಂಡು ಬರುತ್ತದೆ. ಈ ದಂಗೆಯಲ್ಲಿದ್ದವರನ್ನು ಸಮಾಧಾನಪಡಿಸುವ ಪ್ರಯತ್ನ ವಿಫಲವಾಯಿತು ಎಂದು ತಿಳಿಸುತ್ತಾನೆ. ಅಲ್ಲದೆ ಒಂದೊಮ್ಮೆ ದಂಗೆಯಲ್ಲಿ ಭಾಗವಹಿಸಲು ಆಸಕ್ತಿ ತೋರದಿದ್ದರೆ ಅಂತಹವರಿಗೆ ಮೂಳೆ, ಕೊಂಬುಗಳನ್ನು ಹಿಡಿದು ಶಾಪಹಾಕುವುದು, ಬೇವಿನಸೊಪ್ಪನ್ನು ಅಂತಹವರ ಮನೆಯ ಬಾಗಿಲಿಗೆ ಸಿಕ್ಕಿಸುವುದು, ಗ್ರಾಮ ಬಿಡಿಸುವುದಾಗಿ ಹೆದರಿಸುತ್ತಾರೆ. ಫೌಜುದಾರನ ಈ ವರದಿಯನ್ನಾಧರಿಸಿ ಮೈಸೂರು ರೆಸಿಡೆಂಟ್‌ನಾಗಿದ್ದ ಕಸಮೈಜಾರ್‌ನು ಈ ದಂಗೆ ನಿಂತರೆ ರೈತರನ್ನು ಹದ್ದುಬಸ್ತಿನಲ್ಲಿಡಲು ವೆಂಕಟರಾಜ ಅರಸನನ್ನು ಕಳುಹಿಸಿದನು. ಅದರಂತೆ ವೆಂಕಟರಾಜ ಅರಸನು ಬೂದಿಹಾಳ್ ಸಮೀಪದ ಚಿಕ್ಕನಾಯ್ಕನ ಹಳ್ಳಿಗೆ ಆಗಮಿಸಿ ದಂಗೆ ನಿರತ ರೈತರನ್ನು ದಂಗೆ ಕೈಬಿಡುವಂತೆ ಪ್ರಯತ್ನಿಸಿ ವಿಫಲವಾದನು. ಹಾಗಾಗಿ ಅವನು ಈ ದಂಗೆಯನ್ನಡಗಿಸಲು ಮಹಾರಾಜರಿಂದ ಮಾತ್ರ ಸಾಧ್ಯವೆಂದು ವರದಿ ನೀಡಿದನು.

ನಗರ ಪ್ರಾಂತ್ಯದಲ್ಲಿ ದಂಗೆಯ ನೇತೃತ್ವವನ್ನು ಮುಖ್ಯವಾಗಿ ಬೂದಿಬಸಪ್ಪ, ತರಿಕೆರೆ ನಿವೃತ್ತ ಪಾಳೆಗಾರ ರಂಗಪ್ಪನಾಯಕ ಮತ್ತಿತರ ನಾಯಕರು ವಹಿಸಿಕೊಂಡಿದ್ದಾರೆ. ತುಮಕೂರು, ಚಿತ್ರದುರ್ಗ, ಹಾಸನ, ಮೈಸೂರು, ದೊಡ್ಡಬಳ್ಳಾಪುರ, ಮಂಡ್ಯ ಜಿಲ್ಲೆಗಳಲ್ಲಿ ರೈತರು, ಪಟೇಲರು ದಂಗೆಯ ನೇತೃತ್ವವನ್ನು ವಹಿಸಿಕೊಂಡಿದ್ದು, ದಂಗೆಯು ಕೈ ಮೀರಿ ಹೋಗತೊಡಗಿತು. ಈ ಬಗ್ಗೆ ಮೈಸೂರು ರಾಜ್ಯದ ರೆಸಿಡೆಂಟನಾದ 'ಕಸಮೈಜಾರನು' ಜನವರಿ 2, 1831 ರಂದು ಮದ್ರಾಸ್ ಗೌರ್‍ನರ್‌ಗೆ ಬರೆದ ಪತ್ರದಲ್ಲಿ "ರಾಜ ಮತ್ತು ಅಧಿಕಾರಿಗಳ ಬಗ್ಗೆ ಜನರಲ್ಲಿ ಅಸಂತೃಪ್ತಿ ತೀವ್ರವಾಗಿ ಎಲ್ಲರಲ್ಲಿ ಮನೆಮಾಡಿದೆ ಎಂದು ತಿಳಿಸಲು ವಿಷಾದಿಸುತ್ತೇನೆಂದು, ತಾಲ್ಲುಕುಗಳ ಮುಖ್ಯ ಪಟೇಲರುಗಳು ***ಕೂಟಂ*** ಎಂದು ಕರೆಯಲ್ಪಡುವ ಒಕ್ಕೂಟಗಳಲ್ಲಿ ಎರಡರಿಂದ ಮೂರು ಸಾವಿರ ಜನರನ್ನು ಒಟ್ಟುಗೂಡಿಸಿಕೊಂಡಿರುವುದನ್ನು ಕಾಣಬಹುದು. ರಾಜನು ಕೈಗೊಂಡ ಎಲ್ಲಾ ಶಾಂತಿ ಯತ್ನಗಳೂ ವಿಫಲವಾಗಿವೆ. ಅಲ್ಲದೆ ರಾಜನು ದಂಗೆ ನಿರತ ಪ್ರದೇಶಗಳಲ್ಲಿ ಪ್ರವಾಸ ಕೈಗೊಂಡಾಗ ರೈತರು ರಾಜನಿಗೆ ನೀಡಿದ ಮನವಿ ಪತ್ರಗಳಲ್ಲಿ ಕೆಲವು ಅಮಲ್ದಾರರು ಮತ್ತು ಅವರ ಕೆಳಗಿನ ಅಧಿಕಾರಿಗಳು ತೀರ ಕೆಟ್ಟವರಾಗಿದ್ದು, ಅವರುಗಳನ್ನು ತೆಗೆದು ಹಾಕಬೇಕೆಂದು ವಾದಿಸಿದ್ದಾರೆ ಎಂದು ತಿಳಿಸಿದನು. ಹೀಗೆ ದಂಗೆಯು ಮೈಸೂರು ಸಂಸ್ಥಾನದಾದ್ಯಂತ ಕಾಡ್ಗಿಚ್ಚಿನಂತೆ ವೇಗವಾಗಿ ಹರಡುತ್ತಿದ್ದುದರಿಂದ ರೆಸಿಡೆಂಟ್‌ನು ಈ ದಂಗೆಯನ್ನು ತಡೆಯಲು, ರೈತರು ತೆರಿಗೆ ನಿರಾಕರಿಸುವುದಕ್ಕೆ ಕಾರಣ ಅರಿಯಲು, ಸಮಸ್ಯೆಗಳನ್ನು ಆಲಿಸಲು ಮತ್ತು ತಪ್ಪಿತಸ್ಥ ಅಧಿಕಾರಿಗಳನ್ನು ಶಿಕ್ಷಿಸಲು ಸ್ವತಃ ರಾಜನೇ ದಂಗೆನಿರತ ಪ್ರದೇಶಗಳಿಗೆ ಭೇಟಿ ನೀಡಿ ದಂಗೆಯನ್ನು ಶಮನಗೊಳಿಸಲು ಸಾಧ್ಯವಾಗಬಹುದೆಂದು ಮಹಾರಾಜನಿಗೆ ನಿರ್ದೇಶಿಸಿದನು.

**ದಂಗೆನಿರತ ತುಮಕೂರು ಜಿಲ್ಲೆ ಮತ್ತು ಇತರ ಭಾಗಗಳಿಗೆ ಮುಮ್ಮಡಿ ಕೃಷ್ಣರಾಜ ಒಡೆಯರ ಭೇಟಿ**

ಮುಮ್ಮಡಿ ಕೃಷ್ಣರಾಜ ಒಡೆಯರು_ದಂಗೆ ನಿರತ ಪ್ರದೇಶಗಳಿಗೆ ಭೇಟಿ ನೀಡಿ ಶಾಂತಿ ಸೃಷ್ಟಿಸುವ ಸಲುವಾಗಿ, ಡಿಸೆಂಬರ್ 13, 1831 ರಂದು ಅಶ್ವದಳ, ಪಾವತಿದಳ ಹಾಗೂ ಉನ್ನತ ಅಧಿಕಾರಗಳ ಜೊತೆ

ಮೈಸೂರಿನಿಂದ ತಮ್ಮ ಪ್ರಯಾಣ ಆರಂಭಿಸಿದರು. ಅಂದೇ ದಸರ ಗುಪ್ಪೆ, ನಂತರ ಡಿಸೆಂಬರ್ 16, 1831 ರಂದು ಅತ್ತಿಗುಪ್ಪೆ (ಈಗಿನ ಕೃಷ್ಣರಾಜಪೇಟೆ) ಭೇಟಿ ನೀಡಿದರು. ಡಿಸೆಂಬರ್ 17, 1831ರಂದು ಬೂಕನಕೆರೆ ಡಿಸೆಂಬರ್ 18, 1831ರಂದು ಚನ್ನರಾಯಪಟ್ಟಣಕ್ಕೂ ಬೇಟಿ ನೀಡಿದರು. ಇಲ್ಲಿ ರೈತರ ಸಮಸ್ಯೆಗಳನ್ನು ಆಲಿಸಿ ಅವರ ಬೇಡಿಕೆಗಳನ್ನು ಈಡೇರಿಸುವುದಾಗಿ ಭರವಸೆ ನೀಡಿ ರೈತರನ್ನು ಸಮಾಧಾನಪಡಿಸಿ ಡಿಸೆಂಬರ್ 20, 1831 ರಂದು ರೈತರಿಗೆ ***"ಪಾನಸುಪಾರಿ"***[3] ನೀಡಿದ ನಂತರ ರೈತರು ಇನ್ನೇನು ತಮ್ಮ ಮನೆಗಳಿಗೆ ಹೊರಡಬೇಕೆನ್ನುವಷ್ಟರಲ್ಲಿ ಈ ಹಿಂದೆ ಹುಳಿಯಾರು, ಚಿಕ್ಕನಾಯ್ಕನಹಳ್ಳಿ, ಬೂದಿಹಾಳ ಮತ್ತು ಸುತ್ತಮುತ್ತಲ ಪ್ರದೇಶಗಳ ದಂಗೆಗಳನ್ನು ಅಡಗಿಸಲು ರೆಸಿಡೆಂಟ್ ಕಸಮೈಜಾರನಿಂದ ಅಲ್ಲಿಗೆ ಕಳುಹಿಸಲ್ಪಟ್ಟಿದ್ದ ವೆಂಕಟರಾಜ ಅರಸನು ತನ್ನ ಕಾರ್ಯದಲ್ಲಿ ವಿಫಲವಾಗಿ (ದಂಗೆ ಅಡಗಿಸಲು) ನೇರವಾಗಿ ಈ ಸುದ್ದಿಯನ್ನು ತಿಳಿಸಲು ಜನವರಿ 20, 1831 ರಂದು ಬೂದಿಹಾಳದಿಂದ ಚನ್ನರಾಯಪಟ್ಟಣಕ್ಕೆ ರಾಜರ ಬಿಡಾರಕ್ಕೆ ಆಗಮಿಸಿ ಬೂದಿಹಾಳ, ಚಿಕ್ಕನಾಯಕನಹಳ್ಳಿ, ಹುಳಿಯಾರು ಮತ್ತು ಸುತ್ತಮುತ್ತಲ ಪ್ರದೇಶಗಳ ರೈತರು ದಂಗೆ ನಿಲ್ಲಿಸಿ ಯಾವುದೇ ಮಾತುಕತೆಗೆ ಬರಲು ಸಿದ್ದರಿಲ್ಲವೆಂದೂ, ಅವರು ತೀವ್ರವಾದ ವಿದ್ವಾಂಸಕ ಕೃತ್ಯ ಮತ್ತು ಕೊಳ್ಳೆಗಳಲ್ಲಿ ನಿರತರಾಗಿದ್ದಾರೆಂದು ಹಾಗಾಗಿ ಈ ದಂಗೆಯನ್ನಡಗಿಸುವಲ್ಲಿ ಅವರಿಗೆ ಶಿಕ್ಷೆಯಿಂದ ಯಾವುದೇ ವಿನಾಯಿತಿ ನೀಡದೆ ಉಗ್ರಕ್ರಮ ಕೈಗೊಳ್ಳಬೇಕೆಂದು ತಿಳಿಸಿದನು. ಇದರಿಂದ ಸಹಜವಾಗಿಯೇ ದಿಗಲು ಹಿಡಿದಂತಾದ ಮಹಾರಾಜರು ದಂಗೆ ಕೋರರನ್ನು ಹತ್ತಿಕ್ಕಲು ಉಗ್ರಶಿಕ್ಷೆಯನ್ನು ವಿಧಿಸಲಾಗುತ್ತಿದೆ ಎಂದು ಎಚ್ಚರಿಸಿದರು.

ಅಲ್ಲದೆ ಡಿಸೆಂಬರ್ 21, 1831 ರಂದು ಸುತ್ತೋಲೆ ಹೊರಡಿಸಿ ಪ್ರತಿ ತಾಲೂಕಿನಲ್ಲಿ ಒಬ್ಬರು ಅಥವಾ ಇಬ್ಬರು ದಂಗೆಕೋರರ ನಾಯಕರನ್ನು ಹಿಡಿದು ನೇಣಿಗೆ ಹಾಕಬೇಕೆಂದೂ, ದಂಗೆನಿರತರ ಗುಂಪಿನ ಮೇಲೆ ಯಾವುದೇ ಸಂಕೋಚವಿಲ್ಲದೆ ನಿರ್ದಯವಾಗಿ ಗುಂಡು ಹಾರಿಸಬೇಕು, ಗುಂಡು ಹೊಡೆದು ಸಾಯಿಸಬೇಕಾದವರಿಗೆ ಗುಂಡು ಹೊಡೆಯಲೆಂದು, ನೇಣಿಗೆ ಹಾಕಬೇಕಾದವರಿಗೆ ನೇಣಿಗೆ ಹಾಕಿರೆಂದು, ಯಾರಾದರೂ ಮೂಳೆ, ಬೇವಿನಸೊಪ್ಪು ಹಿಡಿದುಕೊಂಡು ಓಡಾಡುತ್ತಿದ್ದುದು ಕಂಡುಬಂದರೆ ಅಂತಹವರನ್ನು ತಕ್ಷಣವೇ ಬಂಧಿಸಿ, ವಿಚಾರಣೆ ನಡೆಸಿ ತಪ್ಪಿತಸ್ಥರೆಂದು ಕಂಡುಬಂದರೆ ತಕ್ಷಣವವೆ ಅವರನ್ನು ಗಲ್ಲಿಗೇರಿಸಲಾಗುವುದು ಎಂದು ತಿಳಿಸಲಾಯಿತು. ಇದಲ್ಲದೆ 19 ಮತ್ತು 20ನೇ ಡಿಸೆಂಬರ್ 1830ರಂದು ಮೈಸೂರು ಅಶ್ವಪಡೆಯ ಅಧಿಕಾರಿ ಮಹಮ್ಮದ್ ಅಶ್ರಫ್‌ನಿಗೆ ರಾಜನು ಬರೆದ ಪತ್ರದಲ್ಲಿ 'ದಂಗೆ ನಿರತ ರೈತರಿಗೆ ಮರಣದಂಡನೆ, ಎರಡೂ ಕೈ, ಕಾಲು, ಮೂಗು ಕಿವಿಗಳನ್ನೂ ಕತ್ತರಿಸಲು ಹಿಂಜರಿಯಬಾರದೆಂದು ಸೂಚಿಸಿದ್ದರು'. ನಂತರ ಡಿಸೆಂಬರ್ 26, 1830 ರಂದು ಚನ್ನರಾಯಪಟ್ಟಣದಿಂದ ಹೊರಟು ನುಗ್ಗೆಹಳ್ಳಿಯನ್ನು ತಲುಪಿದರು. ಹಾಗೂ ರೆಸಿಡೆಂಟ್ ಕಸಮೈಜಾರನು ಮಹಾರಾಜರನ್ನು ಇಲ್ಲಿ ಕೂಡಿಕೊಂಡನು., ಅಲ್ಲಿ ಅಮಲ್ದಾರನ ವಿರುದ್ದ ರೈತರ ದೂರುಗಳಿದ್ದು, ಅವರನ್ನು ಸೇವೆಯಿಂದ ವಜಾ ಮಾಡಿದರು. ಅಲ್ಲಿಂದ ಮಹಾರಾಜರು ತುರುವೇಕೆರೆ ತಾಲ್ಲೂಕಿನ ಮಲ್ಲಾಘಟಕ್ಕೆ, ಅಲ್ಲಿಂದ ಕಡಬಾಕ್ಕೆ ಭೇಟಿ ನೀಡಿದರು. ಕಡಬಾದ ಅಮಲ್ದಾರನು ರೈತರಿಗೆ ಕಿರುಕುಳ ನೀಡುತ್ತಿದ್ದು, ಲಂಚ, ಹಣದುರುಪಯೋಗ ಮಾಡಿಕೊಂಡಿದ್ದು, ಸಾಬೀತಾದ್ದರಿಂದ ಅವನನ್ನು ಸೇವೆಯಿಂದ ವಜಾ ಮಾಡಿದರು. ನಂತರ ರಾಜನು ಗುಬ್ಬಿಗೂ, ತುಮಕೂರು ಮತ್ತು ಹೆಬ್ಬೂರಿಗೆ ಬೇಟಿ ನೀಡಿದರು. ನುಗ್ಗೆಹಳ್ಳಿಯಲ್ಲಿ ಮಹಾರಾಜರನ್ನು ಸೇರಿಕೊಂಡಿದ್ದ ರೆಸಿಡೆಂಟನು ಹೆಬ್ಬೂರಿನಿಂದ

[3] ಪಾನಸುಪಾರಿ ಎಂದರೆ ರಾಜನು ರೈತರಿಗೆ ವೀಳ್ಯದೆಲೆಯನ್ನು ನೀಡಿ ಬೀಳ್ಕೊಡುವುದು.

ಮದ್ರಾಸಿಗೆ ಪ್ರಯಾಣ ಬೆಳೆಸಿದರೆ, ಚನ್ನರಾಯಪಟ್ಟಣದಲ್ಲಿ ಮಹಾರಾಜರನ್ನು ಸೇರಿಕೊಂಡಿದ್ದ ವೆಂಕಟರಾಜ ಅರಸನ ದಂಗೆಯನ್ನಡಗಿಸಲು ಚಿತ್ರದುರ್ಗಕ್ಕೆ ಪ್ರಯಾಣ ಬೆಳಿಸಿದನು. ನಂತರ ರಾಜರು ಹೆಬ್ಬೂರಿನಿಂದ ಯಡಿಯೂರಿಗೂ, ಅಲ್ಲಿಂದ ನಾಗಮಂಗಲಕ್ಕೂ ಪ್ರಯಾಣ ಬೆಳೆಸಿ ಅಲ್ಲಿಂದ ಮೈಸೂರನ್ನು ಜನವರಿ 10, 1831 ರಂದು ತಲುಪಿದರು.

ಹೀಗೆ ಮಹಾರಾಜನ ಭೇಟಿಯ ಸಂದರ್ಭದಲ್ಲಿ ಮೈಸೂರು, ಮಂಡ್ಯ, ಹಾಸನ ಮತ್ತು ತುಮಕೂರು ಜಿಲ್ಲೆಗಳಲ್ಲಿ ರೈತರು ತೋರಿದ ಪ್ರತಿಭಟನೆ, ನೀಡಿದ ದೂರುಗಳು, ಮನವಿ, ರಾಜನು ಅಧಿಕಾರಿಗಳನ್ನು ಅವರ ಹುದ್ದೆಗಳಿಂದ ತೆಗೆದುಹಾಕಿದ್ದು, ಶಿಕ್ಷಿಸಿದ್ದು, ಇತ್ಯಾದಿಗಳನ್ನು ಗಮನಿಸಿದರೆ ಭೂಕಂದಾಯ ಹಾಗೂ ತೆರಿಗೆ ಹೊರೆಯು ರೈತರ ಮೇಲೆ ಅಧಿಕವಾಗಿದ್ದುದು, ಅಧಿಕಾರಿಗಳ ಕ್ರೂರತೆ, ಲಂಚಗುಳಿತನ, ಹಣದುರುಪಯೋಗ, ಹಾಗೂ ಇವುಗಳನ್ನು ಸೂಕ್ತ ಸಮಯದಲ್ಲಿ ಪರಿಹರಿಸುವಲ್ಲಿ ರಾಜ ವಿಫಲವಾಗಿದ್ದು, ರಾಜ್ಯಾಡಳಿತವನ್ನೂ ನಿರ್ಲಕ್ಷಿಸಿದ್ದುದು, ರಾಜ್ಯ ನಿರ್ವಹಣೆಯಲ್ಲಿ ರಾಜನ ಅಸಮರ್ಥತೆಯು ಕಂಡುಬರುತ್ತದೆ. ಇದೆಲ್ಲಕ್ಕಿಂತಲೂ ಹೆಚ್ಚಾಗಿ ತುಮಕೂರು ಜಿಲ್ಲೆಯಾದ್ಯಂತ ನಡೆದ ರೈತ ದಂಗೆಯು ರೈತರು ಸ್ವ–ಇಚ್ಛೆಯಿಂದ ನಡೆಸಿದ ದಂಗೆಯಾಗಿದ್ದು, ಇದು ಇಡೀ ಜಿಲ್ಲೆಯಾದ್ಯಂತ ತೀವ್ರತರವಾಗಿ ಹರಡಿದ್ದುದನ್ನು ಗಮನಿಸಿಯೇ ರೆಸಿಡೆಂಟ್ ಕಸಮೈಜಾರನು ಮಹಾರಾಜನಿಗೆ ದಂಗೆ ನಿರತ ತುಮಕೂರು, ಹಾಸನ, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಿಗೆ ಭೇಟಿ ನೀಡಿ ತಕ್ಷಣ ಸಮಸ್ಯೆ ಬಗೆಹರಿಸದಿದ್ದರೆ ಪರಿಸ್ಥಿತಿ ಕೈಮೀರಿ ಹೋಗುತ್ತದೆಂಬುದನ್ನು ಮನಗಂಡಿದ್ದನು. ಈ ರೀತಿ ದಂಗೆಯನ್ನು ಶಮನಗೊಳಿಸಲು ರಾಜನು ಕಿಕ್ಕೇರಿ, ಚನ್ನರಾಯ ಪಟ್ಟಣ, ಸಿರಮಾನಿ, ನುಗ್ಗೇಹಳ್ಳಿ, ನರಸೀಪುರ, ಹೊನ್ನವಳ್ಳಿ, ತುರುವೇಕರೆ, ಗುಬ್ಬಿ, ತುಮಕೂರು, ನಾಗಾವರ, ಹಾರನಹಳ್ಳಿ ಇತ್ಯಾದಿ ಕಡೆಗಳಲ್ಲಿ ಕೈಗೊಂಡ ಭೇಟಿಯು ಸ್ವಲ್ಪ ಯಶಸ್ವಿಯಾದರೂ ರೈತರ ಸಮಸ್ಯೆಗಳನ್ನು ಪೂರ್ಣವಾಗಿ ಪರಿಹರಿಸುವಲ್ಲಿ ವಿಫಲರಾದರೆಂದು ಹೇಳಬಹುದು. ಕಾರಣ ತುಮಕೂರು ಜಿಲ್ಲೆಯಲ್ಲಿ ರಾಜನ ಭೇಟಿಯ ನಂತರವೂ ರೈತರು ಪ್ರತಿಭಟನೆ ಮುಂದುವರಿಸಿದರು. ಈ ಬಗ್ಗೆ ರೆಸಿಡೆಂಟನು ಜನವರಿ 2, 1831 ರಂದು ಮದ್ರಾಸ್ ಸರ್ಕಾರಕ್ಕೆ ಬರೆದ ಪತ್ರದಲ್ಲಿ "ರೈತರು ರಾಜನು ನೀಡಿದ ***'ನಿರೂಪ'*** ತಿರಸ್ಕರಿಸಿದರು. ಹಾಗಾಗಿ ನಿಡಗಲ್ಲು, ತುಮಕೂರು ಇತ್ಯಾದಿಗಳಲ್ಲಿ ರಾಜನ ಪಡೆಗಳು ಮತ್ತು ರೈತರ ನಡುವೆ ನಡೆದ ಘರ್ಷಣೆಗಳಲ್ಲಿ ರೈತರು ತೀವ್ರ ಪ್ರತಿರೋಧ ತೋರಿದರು. ಅಲ್ಲದೆ ಬೂದಿಹಾಳು, ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲುಕುಗಳಲ್ಲಿ 1830ರ ಜುಲೈನಲ್ಲಿ ಪುನಃ ದಂಗೆಯು ತಲೆ ಎತ್ತಿತು. ಅಲ್ಲಿ ಹುಳಿಯಾರು ತಾಲ್ಲೂಕಿನ ಅಮಲ್ದಾರ ಮತ್ತು ಅವನ ಸಹೋದರನನ್ನು ದಂಗೆಕೋರರರ ಗುಂಪಿನಲ್ಲಿದ್ದ ಹಾಗು ತರಿಕೆರೆ ಪಾಳೆಗಾರನ ಸಂಬಂಧಿಕನಾಗಿದ್ದ ಕೆಂಗಹನುಮಪ್ಪನಾಯಕನು ಕೊಲೆ ಮಾಡಿದನು, ಅಂತಿಮವಾಗಿ ಇಲ್ಲಿ ದಂಗೆಯನ್ನು ಹತ್ತಿಕ್ಕಲಾಯಿತು.

ಮಹಾರಾಜರು ಹುಲಿಯೂರು ದುರ್ಗ, ಅಮೃತ್ತೂರು, ಕೊತ್ತಿಗೆರೆ, ಹೆಬ್ಬೂರು, ಕೈದಾಳ, ಕ್ಯಾತಸಂದ್ರ, ಕೊಡವತ್ತಿ, ಯಡಿಯೂರು, ಕುಣಿಗಲ್, ಕೈಕೊಳ, ಗೂಳೂರು, ತುಮಕೂರು, ಹಿರೇಹಳ್ಳ, ದಬ್ಬೇಘಟ್ಟ, ಮಾಯಸಂದ್ರ, ಸೂಳೆಕೆರೆ, ಹೊಸಹಳ್ಳಿ, ನೊಣವಿನಕೆರೆ, ಶೆಟ್ಟಿಹಳ್ಳಿ, ಸಿದ್ಧಾಪುರ, ಗುಬ್ಬಿ, ಚೇಳೂರು, ಕಿಬ್ಬನಹಳ್ಳಿ, ಕೊರಟಗೆರೆ, ಶಿರಾ, ಗುಂದಲಹಳ್ಳಿ, ಮಂಗಳ, ನಾಗಲಮಡಿಕೆ, ಕಳ್ಳಂಬೆಳ್ಳ, ರಂಗಾಪುರ, ಕೆರೆಗೋಡಿ, ತಿಪಟೂರು, ನಿಟ್ಟೂರು, ಹತ್ಯಾಳ, ಶೆಟ್ಟಿಕೆರೆ, ಕುಪ್ಪೂರು, ಎಳನಾಡು, ಹುಳಿಯಾರು, ಬೋರನಕಣಿವೆ, ಬೆಳ್ಳಾರೆ, ಕಂಡಿಕೆರೆ, ಬುಕ್ಕಾಪಟ್ಟಣ, ತುಂಮಡಿ, ಬೆಳಗುಂಬ, ಪಾವಗಡ, ನಿಡಗಲ್ಲು, ಮಿಡಿಗೇಶಿ, ಮಧುಗಿರಿ, ದೊಡ್ಡೇರಿ ಇನ್ನೂ ಮುಂತಾದ ತುಮಕೂರು ಜಿಲ್ಲೆಯ ಸ್ಥಳಗಳಿಗೆ ಭೇಟಿ

ನೀಡಿ ದಂಗೆಯನ್ನು ಹತ್ತಿಕ್ಕುವ ವಿಫಲ ಪ್ರಯತ್ನವನ್ನು ಮಾಡಿದರು.

**ಉಪಸಂಹಾರ**

ಹೀಗೆ ಮೈಸೂರು ಸಂಸ್ಥಾನದಲ್ಲಿ ನಡೆದ ನಗರ ದಂಗೆಯು ತುಮಕೂರು ಜಿಲ್ಲೆಯಾದ್ಯಂತ ವ್ಯಾಪಿಸಿ ತನ್ನದೇಯಾದ ಪ್ರಭಾವವನ್ನು ಬೀರಿತು. ಈ ದಂಗೆಯಲ್ಲಿ ಸಂಸ್ಥಾನದ ಇತರ ರೈತರಂತೆ ತುಮಕೂರು ಜಿಲ್ಲೆಯ ರೈತರು ಸಹ ಮೈಸೂರು ಆಡಳಿತಾಧಿಕಾರಿಗಳ ದುರಾಡಳಿತದ ವಿರುದ್ಧವಾಗಿ ಸೆಟೆದು ನಿಂತರು. ದಂಗೆಯನ್ನು ಹತ್ತಿಕ್ಕಲು ಮುಮ್ಮಡಿ ಕೃಷ್ಣರಾಜ ಒಡೆಯರು ಜಿಲ್ಲೆಯ ಅನೇಕ ಗ್ರಾಮಗಳಿಗೆ ಭೇಟಿ ನೀಡಿ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಅಂತಿಮವಾಗಿ ನಗರ ದಂಗೆಯಿಂದ ಮುಮ್ಮಡಿ ಕೃಷ್ಣರಾಜ ಒಡೆಯರು ಅಧಿಕಾರವನ್ನು ಕಳೆದುಕೊಂಡು ಮೈಸೂರು ಸಂಸ್ಥಾನದಲ್ಲಿ ಕಮಿಷನ್ನರುಗಳ ಆಳ್ವಿಕೆ ಪ್ರಾರಂಭವಾಯಿತು. ಈ ನಗರ ದಂಗೆಯಲ್ಲಿ ಶೋಷಣೆ, ದುರಾಡಳಿತದ ವಿರುದ್ಧ ರೈತರು ಹಾಗೂ ಜನಸಾಮಾನ್ಯರು ಹೇಗೆ ಹೋರಾಟ ಮಾಡಿದರು ಎಂಬುದು ಸ್ಪಷ್ಟವಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- ಭಾಸ್ಕರಪ್ಪ ಸಿ.ಎಸ್.(ಸಂ.) (1981). *ತುಮಕೂರು ಜಿಲ್ಲಾ ದರ್ಶನ.*
- ವಿರೂಪಾಕ್ಷ ಪೂಜಾರಹಳ್ಳಿ, (2012). ಕರ್ನಾಟಕದಲ್ಲಿ ಬ್ರಿಟಿಷರ ವಿರುದ್ಧ ನಡೆದ ಬೇಡ ನಾಯಕರ ದಂಗೆಗಳ ಅವಲೋಕನ. **ಇಲ್ಲಿ** ರಾಜು (ಸಂ.) ನ್ಯಾಷನಲ್ ಕಾನ್ಫರೆನ್ಸ್ ಆನ್ ರಿವೋಲ್ಟ್ ಅಗೈನ್ಸ್ಟ ಬ್ರಿಟಿಷ್ ರೂಲ್ ಇನ್ ಕರ್ನಾಟಕ, ತುಮಕೂರು ಯೂನಿವರ್ಸಿಟಿ.
- Sebastian Joseph. (1980). *A Service Elite Against the Peasant Encounter and Collision (Mysore 1799—1831),* INC. Pp-677
- Sebastian Joseph. (1980). Peasant revolt in Princely Mysore (1830-31). *Journal of Peasant Studies*. 16(1). Pp.4
- Shama Rao, (1936). *Modern Mysore from the beginning to 1868,* Volume – I, Pp.417-419.
- Singraiya. M. (1905). *Sree Chamarajendra Wodeyara Charitrae,* Pp.26-28
- Suryanatha U Kamath. (1982). *Karnataka State Gazetteer,* government of Karnataka.
- Thomas Hawker. (1883). *Report on the Origin etc., of the Disturbances in Mysore*. Pp.4